**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ ಮಾದೇಗೌಡ (ದಕ್ಷಿಣ ಪದವೀಧರರ ಕ್ಷೇತ್ರ) ಇವರು ನಿಯಮ-72 ರಡಿ ಗಮನಸೆಳೆದಿರುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:** ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕು ವಿ.ಸಿ.ಫಾರಂನಲ್ಲಿ ಪ್ರಸಕ್ತ ಸಾಲಿನಿಂದಲೇ 'ಮಂಡ್ಯ ಕೃಷಿ ವಿಶ್ವವಿದ್ಯಾಲಯ' ಕಾರ್ಯಾರಂಭ ಮಾಡಲಿದೆಯೆಂದು ಸರ್ಕಾರ ಈಗಾಗಲೇ ಹಲವುಬಾರಿ ಹೇಳಿದೆ. ಈ ವಿವಿ ತನ್ನ ವ್ಯಾಪ್ತಿಗೆ ಹಲವು ಕಾಲೇಜುಗಳನ್ನು ಸೇರ್ಪಡೆಗೊಳಿಸಿಕೊಳ್ಳಲಾಗಿದೆ. ಆದರೆ, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಮೈಸೂರಿನ ಯಲಚಹಳ್ಳಿಯಲ್ಲಿರುವ ತೋಟಗಾರಿಕಾ ಮಹಾವಿದ್ಯಾಲಯವನ್ನು ಹೊರಗಿಡಲಾಗಿದೆ ಎಂದು ಹೇಳಲಾಗಿದೆ. ಮೈಸೂರಿನಿಂದ ಬಾಗಲಕೋಟೆಗೆ ಸುಮಾರು 560 ಕಿ.ಮೀ.ಅಂತರವಿದ್ದು, ವಿದ್ಯಾರ್ಥಿಗಳಿಗೂ ಅನಾನುಕೂಲವಾಗಲಿದೆ. ಹಾಗಾಗಿ, ಮಂಡ್ಯ ಕೈಸಮೀಪದಲ್ಲೇ ಇರುವ ಮೈಸೂರಿನ ತೋಟಗಾರಿಕೆ ವಿಶ್ವವಿದ್ಯಾಲಯವನ್ನು ಮಂಡ್ಯದ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಮಾಡುವುದು ಎಲ್ಲಾರೀತಿಯಲ್ಲೂ ಸೂಕ್ತವಾಗಿದೆ. ವಿದ್ಯಾರ್ಥಿಗಳು ಮತ್ತು ವಿವಿದೃಷ್ಟಿಯಿಂದಲೂ ಇದು ಉತ್ತಮ ನಿರ್ಧರವಾಗಲಿದೆ ಎಂದು ಮಾನ್ಯ ಕೃಷಿ ಸಚಿವರ ಗಮನಸೆಳೆದಿರುವ ಬಗ್ಗೆ.

**ಉತ್ತರ:** 2024-25ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಚಾನಲ್ ಫಾರಂ (ವಿ.ಸಿ.ಫಾರಂ) ಇಲ್ಲಿ ನೂತನ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ:13.01.2025 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯಾದ್ಯಂತ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಅರಣ್ಯ ಕಾಲೇಜುಗಳನ್ನು ಮರು ಸಂಘಟಿಸಲು ತಜ್ಞರ ಸಮಿತಿಯನ್ನು ರಚಿಸುವಂತೆ ಸೂಚಿಸಲಾಗಿರುತ್ತದೆ.

ಅದರಂತೆ, ಸರ್ಕಾರದ ಆದೇಶ ಸಂಖ್ಯೆ: AGRI 11 AUB 2024, ದಿನಾಂಕ:25.03.2025 ರಲ್ಲಿ ಶ್ರೀ ಟಿ.ಎಂ. ವಿಜಯಭಾಸ್ಕರ್, ಭಾ.ಆ.ಸೇ, ನಿವೃತ್ತ ಮುಖ್ಯ ಕಾರ್ಯದರ್ಶಿಗಳು ಹಾಗೂ ಮಾಜಿ ಅಧ್ಯಕ್ಷರು, 2ನೇ ಆಡಳಿತ ಸುಧಾರಣಾ ಆಯೋಗ ಇವರ ಅಧ್ಯಕ್ಷತೆಯಲ್ಲಿ ಕೃಷಿ ತೋಟಗಾರಿಕೆ, ಪಶುಸಂಗೋಪನೆ ಮತ್ತು ಅರಣ್ಯ ಕಾಲೇಜುಗಳ ಮರುಸಂಘಟನೆ ಬಗ್ಗೆ ತಜ್ಞರ ಸಮಿತಿ (Re-organisation of Agricultural Universities) ಯನ್ನು ರಚಿಸಲಾಗಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2025 ರಲ್ಲಿ ನೂತನವಾಗಿ ಪ್ರಾರಂಭಿಸಲಾದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯವನ್ನು ಸೇರ್ಪಡಿಸ ಲಾಗಿರುತ್ತದೆ. ಸದರಿ ವಿಧೇಯಕದಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿ ಗೊಳಪಡುವ ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು, ವಿಸ್ತರಣಾ ಶಿಕ್ಷಣ ಘಟಕಗಳು ಹಾಗೂ ಇತರೆ ಸಂಸ್ಥೆಗಳನ್ನು ಹೊರತುಪಡಿಸಿ, ವಿಧೇಯಕವನ್ನು ಜಾರಿಗೊಳಿಸಲಾಗಿರುತ್ತದೆ. ಸದರಿ ಅಧಿನಿಯಮದಲ್ಲಿ ಕೃಷಿ, ಪಶುಸಂಗೋಪನೆ,

ಮೀನುಗಾರಿಕೆ, ರೇಷ್ಮೆಕೃಷಿ, ಅರಣ್ಯಶಾಸ್ತ್ರ, ಇತರ ಕೃಷಿ ಸಂಬಂಧಿತ ವಿಷಯಗಳು ಮತ್ತು ತರಬೇತಿ ಅಥವಾ ಶೈಕ್ಷಣಿಕ ಕೇಂದ್ರಗಳ ನಿರ್ವಹಣೆ, ಕ್ಷೇತ್ರ ವಿಸ್ತರಣಾ ಕೆಲಸಗಾರರಿಗೆ ತರಬೇತಿ ಕಾರ್ಯಕ್ರಮಗಳು ಮತ್ತು ಸಂಶೋಧನೆ ಮತ್ತು ಪ್ರಾಯೋಗಿಕ ಕೇಂದ್ರಗಳು ಹಾಗೂ ಅದರ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗಿನ ವಿವಿಧ ಭಾಗಗಳಲ್ಲಿ ಅಗತ್ಯಪಡಿಸಬಹುದಾದಂತಹ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಪ್ರತಿಯೊಂದು ವಿಶ್ವವಿದ್ಯಾಲಯದ್ದಾಗಿರತಕ್ಕದ್ದು ಎಂಬುದನ್ನು ಪ್ರತಿಯೋಜಿಸಲಾಗಿದೆ.

ದಿನಾಂಕ:13.01.2025 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಸೂಚಿಸಿರುವಂತೆ ರಾಜ್ಯಾದ್ಯಂತ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಅರಣ್ಯ ಕಾಲೇಜುಗಳನ್ನು ಮರು ಸಂಘಟಿಸಲು ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ನೀಡುವ ವರದಿಯಲ್ಲಿನ ಶಿಫಾರಸ್ಸುಗಳನ್ನು ನಿರೀಕ್ಷಿಸಲಾಗಿದೆ.

AGRI 93 AUB 2025.

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

*****